ರಾಜ್ಯದಲ್ಲಿ ಎಣ್ಣೆ ಕಾಳಿನ ಉತ್ಪಾದನೆಯ ಬೆಲೆ.

೧೩೧೮(೧೯೭೯)ಶ್ರೀ ಕೆ. ಹರ್ಷ ಕುಮಾರ ಗೌಡ (ಚಾಮರಾಜ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವರ್ಷ ಒಂದಕ್ಕೆ ಎಷ್ಟು ಲಕ್ಷ ಟನ್ ಎಣ್ಣೆಕಾಳು ಉತ್ಪಾದನೆಯಾಗುತ್ತದೆ ಮತ್ತು ಅದರ ಅಂದಾಜು ಬೆಲೆ ಎಷ್ಟು?

ಆ) ಎಣ್ಣೆ ಬೀಜಗಳಿಂದ ಎಣ್ಣೆ ಉತ್ಪಾದಿಸುವ ಕೈಗಾರಿಕೆಗಳು ರಾಜ್ಯದಲ್ಲಿ ಎಷ್ಟಿವೆ?

ಇ) ಪ್ರತಿ ವರ್ಷ ಹೊರ ರಾಜ್ಯಗಳಿಂದ ಆಮದು ಮಾಡಿಕೊಳ್ಳುತ್ತಿರುವ ಎಣ್ಣೆ ಬೆಲೆ ಎಷ್ಟು?

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಸಚಿವರು):-

ಅ) ಕರ್ನಾಟಕ ರಾಜ್ಯದಲ್ಲಿ ೧೯೮೯-೯೦ನೇ ಸಾಲಿನಲ್ಲಿ ೧೩.೮೬ ಲಕ್ಷ ಟನ್ ಹಾಗೂ ೧೯೯೦-೯೧ನೇ ಸಾಲಿನಲ್ಲಿ ೧೩.೯೬ ಲಕ್ಷ ಟನ್ (ತಾತ್ಕಾಲಿಕ) ಉತ್ಪಾದನೆಯಾಗಿರುತ್ತದೆ.

ಆ) ಕರ್ನಾಟಕ ರಾಜ್ಯದಲ್ಲಿ ಒಟ್ಟು ೩೫೮ ಎಕ್ಸ್‌ಟ್ರಾಕ್ಷನ್ ಪ್ಲಾಂಟ್ ಪ್ರತಿ ದಿನಕ್ಕೆ ೫೩೭೦ ಮೆಟ್ರಿಕ್ ಟನ್‌ನಷ್ಟು ಎಣ್ಣೆ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

ಇ) ೪ ಲಕ್ಷ ಟನ್‌ಗಳಷ್ಟು ಎಣ್ಣೆಯನ್ನು ಹೊರರಾಜ್ಯಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಬೆಳೆಯುವ ತಂಬಾಕಿನ ಉತ್ಪಾದನೆಯ ಪ್ರಮಾಣ

೧೩೧೯(೧೯೮೦)ಶ್ರೀ ಕೆ. ಹರ್ಷ ಕುಮಾರ ಗೌಡ (ಚಾಮರಾಜ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಬೆಳೆಯುವ ತಂಬಾಕಿನ ಪ್ರಮಾಣವೇನು? ಮತ್ತು ಅದರ ಅಂದಾಜು ಬೆಲೆ ಎಷ್ಟು?

ಆ) ಈ ಉತ್ಪಾದಿತ ತಂಬಾಕನ್ನು ಖರೀದಿಸುವ ಪ್ರಮುಖ ರಾಜ್ಯಗಳು ಯಾವುವು?

ಇ) ರಾಜ್ಯದಲ್ಲಿ ಬೆಳೆದ ತಂಬಾಕನ್ನು ಕೊನೆಯ ಹಂತದವರೆಗೆ ಸಂಸ್ಕರಿಸುವ ಕೈಗಾರಿಕಾ ವ್ಯವಸ್ಥೆ ರಾಜ್ಯದಲ್ಲಿದೆಯೇ? ಇದ್ದರೆ ಅಂತಹ ಉದ್ಯಮಗಳ ಸಂಖ್ಯೆ ಎಷ್ಟು?

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಸಚಿವರು):-

ಅ) ರಾಜ್ಯದ ಉತ್ಪಾದನೆ ೦.೩೮ ಲಕ್ಷ ಟನ್ ಹಾಗೂ ಇದರ ಅಂದಾಜು ಬೆಲೆ ರೂ. ೧೧೨.೧೭ ಕೋಟಿ.

ಆ) ಆಂಧ್ರ ಪ್ರದೇಶ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳು.

ಇ) ಇಲ್ಲ.

ಲಂಬಾಣಿ ತಾಂಡಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ.

೧೩೨೧(೨೦೦೨)ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಕಂದಾಯ ಸಚಿವರು ಈ

ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಂಡಸೀ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಒಟ್ಟು ಲಂಬಾಣಿ ತಾಂಡಗಳೆಷ್ಟು ಮತ್ತು ಯಾವ ಹೋಬಳಿಗೆ ಸೇರಿದೆ?

ಆ) ಅವುಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ವೆ ನಡೆದಿದೆಯೇ? (ನಡೆದಿದ್ದಲ್ಲಿ ಅದರ ಮಾಹಿತು ಒದಗಿಸುವುದು).

ಇ) ಅವುಗಳಲ್ಲಿ ಎಷ್ಟು ತಾಂಡಾಗಳಿಗೆ ಕನಿಷ್ಠ ಅವಶ್ಯಕತೆಗಳಾದ ಶಾಲೆ, ನೀರು, ವಿದ್ಯುಚ್ಛಕ್ತಿ ಮತ್ತು ರಸ್ತೆ ಸೌಕರ್ಯಗಳನ್ನು ಒದಗಿಸಲಾಗಿದೆ?

ಈ) ಆ ತಾಂಡಾಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಡಿಸಿಕೊಂಡಿದ್ದರೆ ಅದರ ಕಾರ್ಯಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೧೨. ಗಂಡಸೀ ಹೋಬಳಿ - ೨, ಜಾವಗಲ್ ಹೋಬಳಿ - ೧೦.

ಆ) ಹೌದು

ಇ) ಶಾಲಾ ಸೌಲಭ್ಯವನ್ನು ಹೊರತು ಪಡಿಸಿ ಉಳಿದೆಲ್ಲಾ ಸೌಕರ್ಯವನ್ನು ಮೇಲೆ ಹೇಳಿದ ಎಲ್ಲಾ ತಾಂಡಾಗಳಿಗೆ ಒದಗಿಸಿದೆ.

ಈ) ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಕಳ್ಳಂಬೆಳ ಕ್ಷೇತ್ರಕ್ಕೆ ಸೇರಿದ ಗ್ರಾಮಗಳಿಗೆ ಪಶುವೈದ್ಯಶಾಲೆ ಮಂಜೂರಾತಿ.

೧೩೨೨(೨೦೦೫) ಶ್ರೀ ಡಿ. ಬಿ. ಜಯಚಂದ್ರ (ಕಳ್ಳಂಬೆಳ):- ಮಾನ್ಯ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳ್ಳಂಬೆಳ ಕ್ಷೇತ್ರಕ್ಕೆ ಸೇರಿದ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಎಳನಾಡು ಗ್ರಾಮ ಮತ್ತು ಶಿರು ತಾಲ್ಲೂಕಿನ ಮಾದೇನಹಳ್ಳಿ ನೇರಳೆಗುಡ್ಡ ಹಾಗೂ ಚಿಕ್ಕನ ಹಳ್ಳಿ ಗ್ರಾಮಗಳಿಗೆ ಮಶುವೈದ್ಯಶಾಲೆಯ ಮಂಜೂರಾತಿಗಾಗಿ ಅನೇಕ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರೀ ಗ್ರಾಮಗಳಲ್ಲಿ ಪಶುವೈದ್ಯ ಕೇಂದ್ರ ಅವಶ್ಯಕತೆಯ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ?

ಇ) ಪಶುವೈದ್ಯ ಶಾಲೆಗಳಿಲ್ಲದೇ ಅಲ್ಲಿಯ ರೈತರುಗಳು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸದರೀ ಗ್ರಾಮದಲ್ಲಿ ಮಶುವೈದ್ಯ ಶಾಲೆಗಳನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ಹಾಗೂ ಅದನ್ನು ಯಾವಾಗ ತೆರೆಯಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ, ಪಶುವೈದ್ಯ ಸಚಿವರು):-

ಅ) ಹೌದು

ಆ) ಹೌದು